ಅಲ್ಲಿ ಮಾಹಿತಿಯನ್ನು ಮತ್ತು ಪ್ರಾತ್ಯಕ್ಷಿಕೆಯನ್ನು ನಡೆಸಬೇಕಾಗುತ್ತದೆ. ಸಾರ್ವಜನಿಕ ಕಾರ್ಯಕ್ರಮಗಳಿಗೂ ಸಹ ಅನುಕೂಲವಾಗುತ್ತದೆ. ಆ ಕಾರಣ ತಾವೂ ಸರ್ಕಾರಕ್ಕೆ ಒತ್ತಾಯ ಮಾಡಿ ಗಾಜಿನ ಮನೆಯನ್ನು ನಿರ್ಮಾಣ ಮಾಡಿಸಲಿಕ್ಕೆ ತಾವು ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ನಗರದಲ್ಲಿ ಗಾಜಿನ ಮನೆ ನಿರ್ಮಾಣ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಇವತ್ತಿನ ಪರಿಸ್ಥಿತಿಯನ್ನು ನನಗೆ ತಿಳಿಸಿ ಹೇಳಿದರು. ಮಾನ್ಯ ಸದಸ್ಯರು ಏನು ಸದನದ ಗಮನಕ್ಕೆ ತರುತ್ತಿದ್ದಾರೋ ಬರುವ ದಿನಗಳಲ್ಲಿ ನೀಲಿ ನಕ್ಷೆಯನ್ನು ತಯಾರು ಮಾಡುತ್ತೇವೆ. ಅದರ ಜೊತೆಗೆ ಶಾಸಕರು ಆ ಸ್ಥಳಕ್ಕೆ ಭೇಟಿ ಕೊಟ್ಟಾಗ, ಅಲ್ಲಿ ಆರು ಎಕರೆ ನಮ್ಮ ಜಮೀನು ಇದೆ. ಶಾಸಕರೂ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ ಮತ್ತು ನಮ್ಮ ಇಲಾಖೆಯಿಂದಲೂ ಹಣವನ್ನು ಹಾಕಿ ಮುಂದಿನ ದಿನಗಳಲ್ಲಿ ಗಾಜಿನ ಮನೆಯನ್ನು ನಿರ್ಮಾಣ ಮಾಡುವಂಥ ಕಾರ್ಯಕ್ರಮ ವನ್ನು ಹಾಕಿಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಕೊಳ್ಳೇಗಾಲದಿಂದ ಮಲೈಮಹದೇಶ್ವರ ಬೆಟ್ಟಕ್ಕೆ ಹೋಗುವ ರಸ್ತೆ ಅಭಿವೃದ್ಧಿ

135 (1126) ಶ್ರೀ ನರೇಂದ್ರ ಆರ್. (ಹನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಿಂದ ಮಲೈಮಹದೇಶ್ವರ ಬೆಟ್ಟಕ್ಕೆ ಹೋಗುವ ರಸ್ತೆಗಳು ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅವುಗಳ ದುರಸ್ಥಿ ಹಾಗೂ ನಿರ್ವಹಣೆ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು);

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಕೊಳ್ಳೇಗಾಲದ ಮಲೈ ಮಹದೇಶ್ವರ ಬೆಟ್ಟದ ರಸ್ತೆಯು ರಾಹೆ–79 ಆಗಿದ್ದು ಸರಪಳಿ 59–59 ರಿಂದ 156.60 ಕಿಮೀ ವರೆಗೆ ಒಟ್ಟು 97.31

ಕಿಮೀ ಉದ್ದವಿದ್ದು, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಾದು ಹೋಗುತ್ತಿರುತ್ತದೆ.

ಸದರಿ ರಸ್ತೆಯ ಸರಪಳಿ ಕಿಮೀ 59.59 ರಿಂದ 60.00, 70.00 ರಿಂದ 92.60, 97.60 ರಿಂದ 112.40, 117.40 ರಿಂದ 122.20 ಕಿಮೀ ಒಟ್ಟು 42.61 ಕಿಮೀ ಉದ್ದವು ಸುಸ್ಥಿತಿಯಲ್ಲಿದ್ದು ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

ಉಳಿಕೆ ಸರಪಳಿಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 49.00 ಲಕ್ಷ ಅನುದಾನದಲ್ಲಿ 54.70 ಕಿಮೀ ಉದ್ದದ ರಸ್ತೆಯಲ್ಲಿನ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೊಂಡಿದ್ದು, ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ.

ಶ್ರೀ ನರೇಂದ್ರ. ಆರ್ (ಹನೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಅವರೇ ಒಪ್ಪಿಕೊಂಡಿದ್ದಾರೆ ಅದೇನೆಂದರೆ, 97 ಕಿ.ಮೀ. ರಸ್ತೆಯಲ್ಲಿ 55 ಕಿ.ಮೀ ರಸ್ತೆ ಸಂಚಾರಕ್ಕೆ ಯೋಗ್ಯವಾಗಿಲ್ಲ ಅದಕ್ಕೆ ಗುಂಡಿ ಮುಚ್ಚುವಂಥ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಹೊಸ ರಸ್ತೆಯನ್ನು ಮಾಡಿಕೊಡಿ ಎಂದು ನಾನು ಒಂದು ವರ್ಷದಿಂದಲೂ ಕೇಳುತ್ತಿದ್ದೇನೆ. ಇದು ಯಾತ್ರಾ ಸ್ಥಳ ದಿನಕ್ಕೆ ಸಾವಿರಾರು ವಾಹನಗಳು ಇಲ್ಲಿಂದ ಓಡಾಡುತ್ತವೆ. ನಮ್ಮ ರಾಜ್ಯದಿಂದ ಬರುತ್ತವೆ. ತಮಿಳುನಾಡು, ಆಂಧ್ರದಿಂದ ಅಲ್ಲಿಗೆ ಬರುತ್ತಾರೆ. ಆದರೆ ರಸ್ತೆ 50 ಕಿ.ಮೀ ಓಡಾಡುವಂಥ ಸುಸ್ಥಿತಿಯಲ್ಲಿ ಇಲ್ಲ. ನಮಗೆ ಹೊಸ ರಸ್ತೆ ಮಾಡಿ ಕೊಡಿ ಎಂದರೆ ಅವರು ಗುಂಡಿ ಮುಚ್ಚುವಂಥ ಕಾರ್ಯವನ್ನು ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಕಳೆದ ಬಾರಿಯೂ ಗುಂಡಿ ಮುಚ್ಚುತ್ತೇವೆಂದು ಹೇಳಿದರು. ಈ ಸಲವೂ ಗುಂಡಿಯನ್ನು ಮುಚ್ಚಿದ್ದಾರೆ. ಆದರೆ ಮುಚ್ಚಿರತಕ್ಕಂಥ ಗುಂಡಿ ಒಂದು ತಿಂಗಳು ಅಥವಾ ಎರಡು ತಿಂಗಳು ಸಹಾ ಅದನ್ನು ಯೋಗ್ಯವಾಗಿ ಬಳಸುವುದಕ್ಕೆ ಬರುತ್ತಿಲ್ಲ. ಆದ್ದರಿಂದ 58 ಕಿ.ಮೀ ರಸ್ತೆ ಇರುವುದನ್ನು ಹೊಸದಾಗಿ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂಥ ಸ್ಥಳದಲ್ಲಿ ವಾಹನಗಳ ದಟ್ಟಣೆಯನ್ನು ಗಮನದಲ್ಲಿಟ್ಟು ಕೊಂಡಿದ್ದೇವೆ. ನಾವು ಅದಕ್ಕೆ ಒಂದು ಡಿಪಿಆರ್ ಮಾಡಿ 97.31 ಕಿ.ಮೀ ಅನ್ನು ಒಂದು VGF (Viàbility Gap Fund) ನಲ್ಲಿ ತೆಗೆದುಕೊಳ್ಳಬೇಕೆನ್ನುವ ವಿಚಾರದಲ್ಲಿ ನಾವು ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಅದನ್ನು ಪಿಪಿಪಿ ಮಾಡೆಲ್‌ನಲ್ಲಿ ಮಾಡುವುದಕ್ಕೆ ಈಗಾಗಲೇ 97 ಕಿ.ಮೀ. ಗೆ ಮಾಡಿಸುತ್ತಿದ್ದೇವೆ. ಅತೀ ಶೀಘ್ರದಲ್ಲಿ ಇದಕ್ಕೆ ಟೆಂಡರ್ ಅನ್ನು ಕರೆದು ಕಾರ್ಯಕ್ರಮವನ್ನು ಮಾಡಿಸಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ ಎನ್ನುವುದನ್ನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ರಸ್ತೆ ಬಹಳ ಪ್ರಮುಖವಾದಂಥ ರಸ್ತೆ. ಕರ್ನಾಟಕ, ತಮಿಳುನಾಡು ಸಂಚಾರವಾಗುವಂಥ ರಸ್ತೆ ಮತ್ತು ತಮಗೆಲ್ಲಾ ಗೊತ್ತಿರುವ ಹಾಗೆ ಮಲೈ ಮಹದೇಶ್ವರ ಬೆಟ್ಟ ಬಹಳ ಕರ್ನಾಟಕದಲ್ಲೇ ಅತಿ ಹೆಚ್ಚು ವರಮಾನ ತಂದುಕೊಡುವಂಥ ಒಂದು ಧಾರ್ಮಿಕ ಕ್ಷೇತ್ರವಾಗಿದೆ. ಹಬ್ಬ ಹರಿದಿನಗಳಲ್ಲಿ ಲಕ್ಷಾಂತರ ಜನ ಭಕ್ತಾದಿಗಳು ಈ ದೇವಸ್ಥಾನಕ್ಕೆ ಬರುತ್ತಾರೆ. ಮೊನ್ನೆ ನಡೆದ ಯುಗಾದಿ ಹಬ್ಬಕ್ಕೆ 4 ರಿಂದ 5 ಲಕ್ಷ ಜನ ತಮಿಳುನಾಡು ಮತ್ತು ಕರ್ನಾಟಕ ಎರಡು ಕಡೆಯಿಂದ ಹಬ್ಬದ ಸಂದರ್ಭದಲ್ಲಿ ದರ್ಶನಕ್ಕಾಗಿ ಭಾಗವಹಿಸುತ್ತಾರೆ. ಈ ರಸ್ತೆ ಹದಗೆಟ್ಟಿರುವು ದರಿಂದ ಅಂತಹ ಸಂದರ್ಭದಲ್ಲಿ ಅಲ್ಲಲ್ಲಿ ವಾಹನಗಳು ನಿಂತುಕೊಂಡು ನಾನಾ ರೀತಿಯ ಅಡಚಣೆಗಳಿಂದ ಸಂಚಾರ ಸುಗಮವಾಗಲು ಸಾಧ್ಯವಾಗದೇ ಎಷ್ಟೋ ಜನ ಹಬ್ಬದ ದಿನ ದೇವಸ್ಥಾನಕ್ಕೆ ದರ್ಶನಕ್ಕೆ ಹೋಗುವುದಕ್ಕೆ ಸಾಧ್ಯವಾಗದೇ ಇರುವ ಸನ್ನಿವೇಶ ಕೂಡ ನಿರ್ಮಾಣವಾಗಿದೆ. ಮಾನ್ಯ ಸಚಿವರು ನಮ್ಮ ಭಾಗಕ್ಕೆ ಒಮ್ಮೆ ಭೇಟಿ ಕೊಟ್ಟು, ನಮ್ಮ ಮಹದೇಶ್ವರ ಬೆಟ್ಟದ ರಸ್ತೆಯನ್ನು ವೀಕ್ಷಣೆ ಮಾಡಿ ಆದಷ್ಟು ಬೇಗನೆ ಅದಕ್ಕೆ ಸುಧಾರಣೆ ಮಾಡಿಕೊಡಬೇಕು. ಮತ್ತೆ ಒಂದು ರಾಷ್ಟ್ರಪತಿ ಭವನ ಎಂದು ಹೇಳಿ, ಅದಕ್ಕೆ 3–4 ಕೋಟಿ ರೂ.ಗಳನ್ನು ವೆಚ್ಚ ಮಾಡಿ ಒಂದು ದೊಡ್ಡ ಗೆಸ್ಟ್‌ಹೌಸ್ ಅನ್ನು ಕಟ್ಟಿದ್ದಾರೆ. ಅದು ಉದ್ಘಾಟನೆ ಆಗಿ ಎರಡು ವರ್ಷಗಳ ಮೇಲಾಗಿದ್ದರೂ ಕೂಡ ಇದುವರೆಗೂ ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಅನೇಕ ಸಚಿವರು ಅಲ್ಲಿಗೆ ಬಂದರೂ ಆ ಗೆಸ್ಟ್‌ಹೌಸ್‌ನಲ್ಲಿ ಹೋಗಿ ವಿಶ್ರಾಂತಿ ಪಡೆಯಲು ಸಾಧ್ಯವಾಗದೇ ಇರುವಂಥ ಒಂದು ವಾತಾವರಣವಿದೆ. ಎಷ್ಟೊಂದು ಸರ್ಕಾರದ ಹಣ ಖರ್ಚು ಮಾಡಿ ಅದು ಉಪಯೋಗವಾಗದೇ ಇದ್ದರೆ national waste ಆಗುತ್ತದೆ. ಇದನ್ನು ತಮ್ಮ ಗಮನಕ್ಕೂ ಅನೇಕ ಬಾರಿ ನಾವು ತಂದಿದ್ದೇವೆ. ಅದಕ್ಕೆ ಪೀಠೋಪಕರಣಗಳನ್ನು ಒದಗಿಸತಕ್ಕಂಥದ್ದು ಮತ್ತೆ ಬೇಕಾದಂಥ ಸಿಬ್ಬಂದಿಯನ್ನು ವಿಶೇಷವಾಗಿ ಅಲ್ಲಿ ನೋಡಿಕೊಳ್ಳುವಂಥ ಒಂದು ವ್ಯವಸ್ಥೆಯನ್ನು ತಾವು ಕೂಡಲೇ ಮಾಡಿದರೆ ಸಾರ್ವಜನಿಕರಿಗೆ

ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಸದಸ್ಯರಾದ ಶ್ರೀ ಮಹದೇವ ಪ್ರಸಾದ್‌ರವರು ಅದೇ ಪ್ರದೇಶದಿಂದ ಬಂದಿರುವವರಾಗಿದ್ದು, ಆ ರಸ್ತೆ ಬಗ್ಗೆ ಅವರಿಗಿರುವ ಕಳಕಳಿ ಬಗ್ಗೆ ನನಗೆ ಗೊತ್ತಿದೆ. ನಾನು ಒಂದು ಸಲ ಅಲ್ಲಿಗೆ ಹೋಗಿ ಬಂದಿದ್ದೇನೆ. ಮತ್ತೊಂದು ಸಲ ಹೋಗಬೇಕೆಂದರೆ, ಅವಕಾಶ ಒದಗಿದಾಗ ಹೋಗಿ ಬರುತ್ತೇನೆ. ಈಗ EGF ನಲ್ಲಿ DPR ಮಾಡಿರುವುದನ್ನು ನಿಮ್ಮ ಗಮನಕ್ಕೆ ತಂದಿದ್ದೇವೆ. ಇದರ ಜೊತೆಗೆ, K-SHIP ನಲ್ಲಿ ಇದರ ಪ್ರಸ್ತಾವನೆ ಇತ್ತು. ಹನೂರಿನಿಂದ ಮಹದೇಶ್ವರ ಬೆಟ್ಟದವರೆಗೆ ರಸ್ತೆ ಮಾಡಿದರಾಯಿತು ಎಂಬ ಆಲೋಚನೆ ಇತ್ತು. ಆದರೆ, ಸದ್ಯದಲ್ಲಿ ಅದಕ್ಕೆ ಅವಕಾಶಗಳು ಕಡಿಮೆ ಇರುವುದರಿಂದ; ಅದನ್ನು EGFನಲ್ಲಿ ತೆಗೆದು ಕೊಂಡು, ಸುಮಾರು 97 ಕಿಲೋಮೀಟರ್‌ಗಳ ರಸ್ತೆ ಮಾಡಿಸಬೇಕೆಂದು DPR ಮಾಡಿಸುತ್ತಿದ್ದೇವೆ. ಇದು ತಮ್ಮ ಗಮನಕ್ಕೆ ಬಂದಿರಬಹುದೆಂದು ನಾನು ಭಾವಿಸಿದ್ದೇನೆ. ಜೊತೆಗೆ, 4 ಕೋಟಿ ರೂ.ಗಳನ್ನು ಖರ್ಚು ಮಾಡಿ ಕಟ್ಟಿರುವ ಕಟ್ಟಡಕ್ಕೆ ಪೀಠೋಪಕರಣಗಳಿಲ್ಲದೆ ಉದ್ಘಾಟನೆಯಾಗಿದೆಯೆಂಬ ಮಾತನ್ನು ಅವರು ಒಪ್ಪಿಕೊಳ್ಳುತ್ತಿದ್ದಾರೆ. ಈ ಕೆಲಸವನ್ನು 2010–11ನೇ ಸಾಲಿನಲ್ಲಿ ಮಾಡಿಸಿಕೊಡುವುದಾಗಿ ಅವರಿಗೆ ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಹದೇಶ್ವರ ಬೆಟ್ಟದಲ್ಲಿ ಒಂದು ಸಬ್ ಡಿವಿಜನ್ ಇದೆ. ಆದರೆ, ಅಲ್ಲಿಗೆ ಅಧಿಕಾರಿಗಳು ಬರುವುದಿಲ್ಲ. ಸಮಸ್ಯೆ ಏನೆಂದರೆ, ಬೆಟ್ಟದಲ್ಲಿರುವ ಆ ಸಬ್ ಡಿವಿಜನ್‌ನಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಸುಮಾರು 15 ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅಲ್ಲಿಗೆ ಯಾರೇ ಒತ್ತಡ ತಂದು ಬರಬೇಕೆಂದು ಯಾರೂ ಅಪೇಕ್ಷಿಸುವುದಿಲ್ಲ. ಆದುದರಿಂದ, ಅಲ್ಲಿ ಜ್ಯೂನಿಯರ್ ಇಂಜಿನಿಯರ್‌ಗಳನ್ನು ಹೊರತುಪಡಿಸಿ ಬೇರೆ ಸಿಬ್ಬಂದಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆದುದರಿಂದ, ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸುವ ಕೆಲಸವನ್ನು ತಾವು ಮಾಡಬೇಕಾಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಪರಿಗಣಿಸಲಾಗುವುದು.